Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

ರಾಷ್ಟ್ರೀಯ ವಾರ್ತಾಪತ್ರಿಕೆ
(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 149] ಸೋಮವಾರ 3—5—48 [ಬಿಡಿಪ್ರತಿ 3 ಪೆ

ಮೇಡೇ ಮಹೋತ್ಸವ

ಲಂಡನ್ ಮೇ 1— ಪ್ರಪಂಚದ್ದಿನಾ ನಾ ಕೇಂದ್ರಗಳಲ್ಲಿ ಮೇ ಡೇ ಮಹೋತ್ಸವವು ಅತ್ಯಂತ ವೈಭವದಿಂದ ಆಚರಿಸಲಾಯಿತು; ಕಾರ್ಮಿಕರ ಭಾರಿ ಭಾರಿ ಮೆರವಣಿಗೆ ನಡೆಯಿತು.

ಂ ಂ

ನವದೆಹಲಿ— ಸಂಯುಕ್ತ ರಾಷ್ಟ್ರ ಸಮಿತಿಯ ತೀರ್ಮಾನವು ಹೇಗಿದ್ದರೂ ಭಾರತವು ಅದರಿಂದ ವಾಗಸ್ಸಾಗುವುದಿಲ್ಲ ವೆಂದಿರುವರು ಪಂ|| ನೆಹರು

ಂ ಂ

ನವದೆಹಲಿ— ಇಂಗ್ಲೀಷು ಭಾಷೆಗೆ ಭಾರತದ ವಿದ್ಯಾಭ್ಯಾಸದಲ್ಲಿ ಗೌರವ ಸ್ಥಾನವಿರುವುದೆಂದಿರುವರು ಮೌ || ಆಜಾದ್‌ರವರು

ಉಕ್ಕು ಕಬ್ಬಿಣ ಹತೋಟಿ

ಬೆಂಗಳೂರು — ಭದ್ರಾವತಿಯಿಂದ ಪರ್ಮಿಟ್ಟಿಲ್ಲದೆ ರಿಜಿಸ್ಟರ್ಡ್ ಸ್ಟಾಕು ಹೊಲ್ಡರೊಬ್ಬರ ಹೆಸರಿನಲ್ಲಿ 40 ಬಂಡಲು ಜಿಂಕ್‌ಷೀಟುಗಳನ್ನು ಸಂಸ್ಥಾನದಿಂದ ಹೊರಕ್ಕೆ ಸಾಗಿಸುತ್ತಿದ್ದುದು ಪತ್ತೆಮಾಡಲಾಯಿತು ಮತ್ತು ಆ ಸ್ಟಾಕುಹೋಲ್ಡರಿನ ಲೈಸೆನ್ಸು ರದ್ದುಪಡಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ: ಈ ಸಂದರ್ಭದಲ್ಲಿ ಅಕ್ರಮ ಪರ್ಮಿಟ್ ದೊರಕಿಸಲು ಸಹಾಯಮಾಡಿದ ಕಬ್ಬಿಣ ಉಕ್ಕು ಹತೋಟಿ ಕಛೇರಿಯ ಗುಮಾಸ್ತನೊಬ್ಬನು ಡಿಸ್‌ಮಿಸ್ ಮಾಡಲ್ಪಟ್ಟಿರುವನು ಎಂದು ಸರ್ಕಾರೀ ಪ್ರೆಸ್ ನೋಟು ತಿಳಿಸುತ್ತದೆ

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಷರಬತ್ತು. ಗ್ರೈಪ್ ಸಿರಪ್ ರುಚಿ ಸಿಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಷರಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

ತಯಾರಿಕರು —

Laboratory Ltd.
Bangalore

ಶ್ರೀಮತಿ ಅರುಣಾರವರ

ವೀರವಾಣಿ

ಇಂಡಿಯಾ ಸರಕಾರವು ಮನಸ್ಸು ಮಾಡಿದಲ್ಲಿ ನೈಜಾಂ ಸಂಸ್ಥಾನವೆಲ್ಲವನ್ನೂ ಆರು ಗಂಟೆಗಳೊಳಗೆ ವಶಪಡಿಸಿಕೊಂಡು, ಮದಾಂಧತೆಯಿಂದಿಗೆ ಸುಳಿದಾಡುತ್ತಿರುವ ನೈಜಾಮರನ್ನೂ ನೆಲಜಾಂ ಸಂಸ್ಥಾನದಲ್ಲಿಯ ಇತರ ಇತ್ತೇಹಾದ್ ರೌಡೀ ನಾಯಕರನ್ನೂ ಖೈದಾನ್ನಾಗಿ ಮಾಡುವ ಶಕ್ತಿಯುಳ್ಳದ್ದಾಗಿದೆ. .... 7-8-47 ರಿಂದ ಇದುವರೆಗೂ ಹೈದರಾಬಾದಿನಲ್ಲಿ 12 ಸಾವಿರ ಮಂದಿ ಜೈಲಿನಲ್ಲಿಡಲ್ಪಟ್ಟಿರುವರು; ಮೂರು ಸಾವಿರ ಮಂದಿ ಗ್ರಾಮಾಧಿಕಾರಿಗಳು ಕೆಲಸವನ್ನು ಬಿಟ್ಟಿರುವರು: ಹದಿನೈದು ಸಾವಿರ ಮಂದಿ ವಿದ್ಯಾರ್ಥಿಗಳು ವಿದ್ಯಾಲಯಗಳಿಗೆ ಹೋಗುವುದನ್ನು ಬಿಟ್ಟಿರುವರು. .... —

ಈಗ ಇತ್ತೆಹಾದಿಗಳ ಅಧೀನದಲ್ಲಿ ಸಾಯುಧಂತಾದ ಎರಡು ಲಕ್ಷ ಮಂದಿ ರಜಕರ್ರರೂ, ಎರಡು ಸಾವಿರ ಪಠಾಣರೂ ಹದಿನೈದು ಸಾವಿರ ಅರಬ್ಬರೂ ಇದ್ದಾರೆ; ಇವರ ದುಷ್ಟ ವರ್ತನೆಯಿಂದ 200 ಮಂದಿ ಆರ್ಯಾಯಕರು ಹತಮಾಡಲ್ಪಟ್ಟರು. ಕೋಟಿಗಟ್ಟಲೆ ಬೆಲೆಯುಳ್ಳ ಆಸ್ತಿ ... ಕೊಳ್ಳೇಹೊಡೆಯಲ್ಪಟ್ಟವು ಅಥವ ... ಸುಟ್ಟುಹಾಕಲ್ಪಟ್ಟವು (ಮಾ)

ಂ ಂ

ಮೇರಿಕಾದ

ಸಂರಕ್ಷಣೆಯ ಭಾರ

ಫ್ರೆಂಚು ಎಜ್ಞಾನಿ ಮೇಡಂ ಕ್ಯೂರಿ ಈವಿಷಯದಲ್ಲಿ ಹೀಗೆ ನುಡಿದಿರುವಳು— ಮೊದಲನೆ ಪ್ರಪಂಚ ಯುದ್ಧಾನಂತರ ಅಮೇರಿಕಾ ತಿಳುವಳಿಕೆಇಲ್ಲದ್ದದೇಶವೆಂದುಕೊಂಡೆವು. ಈಗ ಹಾಗೆ ಅಲ್ಲ. ಅಮೇರಿಕರಿಗೆ ಸಂಸ್ಕಾರವೇ ಇಲ್ಲ. ಹಿಟ್ಲರಿನ ಆಡಳಿತದಲ್ಲಿದ್ದ ಜರ್ಮನಿಯಂತೆ ಈಗ ಅಮೇರಿಕಾ ಇದೆ. ಸರ್ಕಾರಗಳನ್ನು ತುಳಿಯಲು ಶಕ್ತಿಯಿದ್ದರೂ ಹೆಚ್ಚು ಕೂಲಿಗಳನ್ನು ತೆಗೆದುಕೊಂಡು ಅಮೇರಿಕ ಕಾರ್ಮಿಕರು ಸೇವೆ ಮಾಡುವರು. ಮೂರ್ಖರು. ಅಮೇರಿಕ ಯುದ್ಧಕ್ಕೆ ತಯಾರಿ ಮಾಡುತ್ತಿದೆ ರಷ್ಯಾದ ಮೇಲೆ ಅಮೇರಿಕಾ ಬೀಳುತ್ತಿದೆ ಯುದ್ಧವು ಬರಲಿ, ಬರದಿರಲಿ, ಹತ್ ವರ್ಷಗಳೊಳಗಾಗಿ ರಷ್ಯ ... ಗಳ...

ಇಂದಿನ ವರ್ತಮಾನ

ಲಂಡನ್....ಸ್ಯಾಲಿಸ್ಬೆರಿಯಲ್ಲಿ ಶಾಂತಿ ನೆಲಸಲು ರಷ್ಯಾ ತನ್ನ ಸೈನ್ಯ ಕಳುಹಿಸುವುದಾಗಿ ತಿಳಿಸಿದೆಯಂತೆ

ನವದೆಹಲಿ .... ಶ್ರೀ ಜೈ ಪ್ರಕಾಶ್ ನಾರಾಯಣರು ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ಬೇಕೆನ್ನುತ್ತಾರೆ; ಆದರೆ ಲಿಬರಲ್ ನುಖಂಡರು ಡೊಮಿನಿಯನ್ ಸ್ಟೇಟಸ್ಸಿನಿಂದಲೇ ಹೆಚ್ಚು ಅನುಕೂಲವೆನ್ನುತ್ತಾರೆ

ಶ್ರೀನಗರ .... ಕಾಶ್ಮೀರವು ಪಾಕಿಸ್ತಾನಕ್ಕೆ ಸೇರುವುದಿಲ್ಲವೆಂದು ರಾಷ್ಟ್ರೀಯ ಸಮ್ಮೇಳನ ಮುಖಂಡರ ಹೇಳಿಕೆ

ಜರ್ಸಿ....ಅಂತರರಾಷ್ಟ್ರೀಯ ಮೋಟಾರು ರೇಸಿನಲ್ಲಿ ಗೆದ್ದ ಜಾರ್ಜ್ ಅಬಿಕಾಸಿಸ್ ಎಂಬುವನು ಗಂಟೆಗೆ ಸರಾಸರಿ 87 ವರೆ ಮೈಲಿ ವೇಗದಲ್ಲಿ ಮೋಟಾರು ನಡೆಸಿದನು.

ಭಯಂಕರ ಕ್ರಾರ್ಯ

ಜರ್ಮನ್ ನರ್ಸ್ ಒಬ್ಬಳಾದ 54 ವರ್ಷದ ಫ್ರಾಕೆ ಹ್ಯಾಕಛರ್ತಳು ಯುದ್ಧ ಕಾಲದಲ್ಲಿ 10 ಸಾವಿರಕ್ಕಿಂತ ಹೆಚ್ಚು ರೋಗಿಗಳಿಗೆ ಗ್ಯಾಸ್ ವಗ್ಗು ವಿಷ ಹಾಕಿ ಕೊಂದದ್ದಕ್ಕಾಗಿ ವ್ಯಾಗಡೆಬರ್ಗ್ ಕೋರ್ಟಿನವರು ಆಕೆಗೆ 15 ವರ್ಷ ಸಶ್ರಮ ಶಿಕ್ಷೆ ವಿಧಿಸಿದರು. ಸ್ಟುಟ್‌ಗಾರ್ಟ್ ದ ಹತ್ತಿರ ಫ್ರಾಂಕ್‌ಫರ್ಟ್ ಮತ್ತು ಗ್ಯಾಎನಕ್ ಆಸ್ಪತ್ರೆಗಳಲ್ಲಿ ಯುದ್ಧಕಾಲದಲ್ಲಿ ಅವಳು ನೇಮಿಸಲ್ಪಟ್ಟಿದ್ದಳು.

ವುಡ್ ಲ್ಯಾಂಡ್ಸ್

30—4—48 ರಿಂದ

SITARA

ಕುರ್ಸಿದ್, ನಾಜರ್, ಮುಬಾರಕ್ ರವರ ಬಾಯಿ ಪಾತ್ರವಹಿಸಿರುವ

ಸಿತಾರ

(ಅಮೋಘ ಹಿಂದಿ ಚಿತ್ರ)

ಪ್ರತಿ ದಿನ 3 ಆಟಗಳು

At Opera

30—4—48 ರಿಂದ

ಮನೋರಮಾ, ಮಜಿಲು ಬೇಗ್, ಅಶ ಹರಿಶಿವದಾಸಿನಿ ಪಾತ್ರವಹಿಸಿರುವ

ಚಂಪಾ

ಪ್ರತಿ ದಿನ 3 ಆಟಗಳು

ತಾ॥ 3-5-48 ॥ಶ್ರೀ॥ ನಂ. 86

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಶ್ರೀ ಜಗದ್ಗುರುಗಳವರ ಸಂಚಾರ

ಶ್ರೀ ಜಗದ್ಗುರು ಶ್ರೀ ದ್ವಾರಕಾ ಪೀಠಾಧೀಶ್ವರರು ಜ್ಯೈತ್ರ ಶುದ್ಧ ೫ ಬುಧವಾರ (ತಾ ॥ 14-4-48) ದಿನ ಸಾವಲಿಯಿಂದ ಪಾದರಾಕ್ಕೆ ಆಗಮಿಸಲು ಸುಂದರ ಸ್ವಾಗತ ಸತ್ಕಾರವಾಯಿತು. ದಿನಾ ಉಪನ್ಯಾಸ ನಡೆಯಿತು. ಏಕಾದಶೀ ಸೋಮವಾರ (ತಾ ॥ 19) ದಿನ ಪಾದರಾದಿಂದ ಶ್ರೀಶ್ರೀಗಳವರು ಮೋಟಾರಲ್ಲಿ ಹೊರಟು ನವಸಾರಿಗೆ ಚಿತ್ತೈಸಲು ಭಕ್ತಜನರು ಸಂದರ್ಶನದಿಂಆ ತುಷ್ಟರಾದರು.

ದ್ವಾದಶೀ ಮಂಗಳವಾರ (ತಾ॥ 20) ದಿನ ನವಸಾರಿಯಿಂದ ಹೊರಟು, ಧರ್ಮಪುರದ ಮಾರ್ಗವಾಗಿ ರಾತ್ರಿ ನಾಸಿಕ ಕ್ಷೇತ್ರಕ್ಕೆ ಆಗಮಿಸಲು, ಸ್ವಾಗತ ನಡೆಯಿತು ಭದ್ರಕಾಳೀ ಮಂದಿರದಲ್ಲಿ ಮೊಕ್ಕಾಂ ಮಾಡಿ ದಿನಾ ಉಪನ್ಯಾಸವಾಗುತ್ತಿದೆ.

ತ್ರಯೋದಶೀ ಬುಧವಾರದದಿನ ನಾಸಿಕದ ಮುಖ್ಯ ಧರ್ಮಾಧಿಕಾರಿಗಳು ವಿಧ್ಯುಕ್ತವಾಗಿ ಪಾದಪೂಜೆ ನಡೆಸಿದರು. ಬಳಿಕ ಜಗದ್ಗುರುಗಳು ಗೋದಾವರೀ ಸ್ನಾನಾರ್ಥವಾಗಿ ಚಿತ್ತೈಸಿ. ರಾಮಕುಂಡದಲ್ಲಿ ವಿಧಿವತ್ತಾಗಿ ಸ್ನಾನಮಾಡಿ ಪೂಜಿಸಿದರು. ಕಪಾಲೇಶ್ವರ, ಗೋರೆ. ರಾಮಮಂದಿರ ಸಂದರ್ಶನಾನಂತರ ಶ್ರೀಗಳವರು ಮೊಕ್ಕಾಮಿಗೆ ಹಿಂದಿರುಗಿದರು

ಜ್ಯೈತ್ರ ಶು. ಪೂರ್ಣಿಮಾ ದಿನ ಚಂದ್ರಗ್ರಹಣ ಪುಣ್ಯ ಸ್ನಾನವನ್ನು ಜಗದ್ಗುರುಗಳು ರಾಮಕುಂಡದಲ್ಲಿ ವಿಧಿವತ್ತಾಗಿ ನೆರವೇರಿಸಿದರು

ಪಂಚವಟೀ — ನಾಸಿಕ

ರಾಮಘಾಟ್— ಶ್ರೀ ರಾಮಚಂದ್ರನು ದಶರಥನಿಗಿಲ್ಲಿ ಪಿಂಡದಾನ ಮಾಡಿದ್ದರಿಂದ ಇದಕ್ಕೆ ರಾಮಕುಂಡ ವೆಂದು ಹೆಸರು. ಗೋಮುಖದಿಂದ ಈ ಕುಂಡಕ್ಕೆ ಒಳಗಿನಿಂದ ನೀರು ಬಂದು ಸೇರುತ್ತಿರುವುದರಿಂದ ಅರುಣ ಸಂಗಮವೆಂದು ಹೇಳುತ್ತಾರೆ.

೨ ಲಕ್ಷ್ಮಣಕುಂಡ— ರಾಮಕುಂಡದ ಬಳಿ ಲಕ್ಷ್ಮಣಕುಂಡವಿದೆ; ಇಲ್ಲಿ ಜನರು ಸ್ನಾನಮಾಡದೆ ಸಂಧ್ಯಾಕರ್ಮಾದಿಗಳಿಗೆ ಮಾತ್ರ ಉಗಯೋಗಿಸುತ್ತಾರೆ!

೩ ಪಂಚವಟಿ— ಊರೊಳಗಿನ ರಸ್ತೆಯಲ್ಲಿ ಐದು ವಟವೃಕ್ಷಗಳಿವೆ : ಇದರಿಂದ ಈ ಸ್ಥಳಕ್ಕೆ ಪಂಚವಟೀ ಎಂದು ಹೆಸರು : ಇಲ್ಲೇ ರಾಮಚಂದ್ರ ; ಸೀತಾ ಲಕ್ಷ್ಮಣರೊಂದಿಗೆ ನಿವಾಸ ಮಾಡಿದ್ದನು.

೪ ನಾಸಿಕ — ಶೂರ್ಪನಖಿಯು ನಾಸಿಕಚ್ಛೇದವಾದ ಸ್ಥಾನವಿದೆ ಗೋದಾವರಿ ಕಪಿಲಾ ನದಿಗಳ ಸಂಗಮದಲ್ಲಿದೆ ಇದು.

ಕುಂಭಮೇಲಾ— ಪ್ರಯಾಗದಂತೆ ನಾಸಿಕದಲ್ಲಿಯೂ 12 ವರ್ಷಕ್ಕೊಂದು ಸಾರಿ ಕುಂಭಮೇಲಾ ನಡೆಯುತ್ತದೆ. ಈ ಸುಪ್ರಸಿದ್ಧ ಪರ್ವವು ಸಿಂಹರಾಶಿಯಲ್ಲಿ ಬೃಹಸ್ಪತಿಯಿದ್ದಾಗ ಬರುವುದು. ಆ ಸಮಯದಲ್ಲಿ ದೇಶದೇಶಾಂತರದ ಲಕ್ಷಗಟ್ಟಲೆ ಯಾತ್ರಿಕರು, ಸಾಧುಮಹಾತ್ಮರೂ ಬಂದು ಸೇರುವರು

ಜ್ಯೈತ್ರ ಬ. ೧ ಶನಿವಾರ (ತಾ॥ 24) ಜಗದ್ಗುರುಗಳು ತ್ರ್ಯಂಬಕೇಶ್ವರ ಕ್ಷೇತ್ರಕ್ಕೆ ಚಿತ್ತೈಸಿದರು, ನಾಸಿಕದಿಂದ 18 ಮೈಲಿ ದೂರದಲ್ಲಿ ಈ ಕ್ಷೇತ್ರವಿದ್ದು ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದು ಮುಖ್ಯ ಜ್ಯೋತಿರ್ಲಿಂಗವಾಗಿದೆ.

ತ್ರ್ಯಂಬಕೇಶ್ವರದಿಂದ ಒಂದೆರಡು ಮೈಲಿಗಳಲ್ಲಿ ಬ್ರಹ್ಮಗಿರಿ ಎಂಬ ದೊಡ್ಡ ಪರ್ವತವಿದ್ದು ಮೇಲೆ ಗೋದಾವರೀ ಉದ್ಗಮವಾಗಿದೆ.

ಶ್ರೀಶ್ರೀಗಳವರು ಸಪರಿವಾರರಾಗಿ ಬ್ರಹ್ಮಗಿರಿಯನ್ನು ಆರೋಹಿಸಿ, ಗೋದಾವರೀ ಮೂಲಸ್ಥಾನವನ್ನು ಸಂದರ್ಶಿಸಿದರು. ಔದುಂಬರ ವೃಕ್ಷಗಳ ನಡುವೆ ಈ ಕುಂಡವಿದೆ ಅಲ್ಲಿ ಆಚಮನ ಪ್ರೋಕ್ಷಣೀ ಮಾಡಿಕೊಂಡು ಬಳಿಯ ಸೂರ್ಯಕುಂಡವನ್ನು ಸಂದರ್ಶಿಸಿ ಹತ್ತಿರದ ಗೋದಾವರೀದೇವೀ ಮಂದಿರ, ಅಲ್ಲಿ ಗೋಮುಖದಿಂದ ಬೀಳುತ್ತಿರುವ ಗೋದಾವರೀ, ಶಿವಲಿಂಗಗಳನ್ನು ಸಂದರ್ಶಿಸಿದರು.

ಅಲ್ಲಿಂದ ಸ್ವಲ್ಪ ದೂರದಲ್ಲಿ ಗೌತಮ ಋಷಿಯ ತಪಸ್ಸಿಗೆ ಮೆಚ್ಚಿ ಈಶ್ವರನು ಜಡೆ ಬಡಿದು ಗೋದಾವರಿಯನ್ನು ಪ್ರಕಟಗೊಳಿಸಿದ ಸ್ಥಾನವಿದೇ. ಹೀಗೆ ಬ್ರಹ್ಮಗಿರಿಯ ಮೇಲಣ ಸ್ಥಾನಗಳನ್ನೂ ದೃಶ್ಯಗಳನ್ನೂ ಸಂದರ್ಶಿಸಿ ಶ್ರೀ ಶ್ರೀಗಳವರು ಸ್ನಾನಪೂಜೆಗಳನ್ನು ನಡೆಸಿದರು ; ಬಳಿಯಲ್ಲೇ ಇನ್ನೊಂದು ಕಡೆ ಗೋರಖನಾಥನ ಗುಹೆ ಇದೆ

ಪರ್ವತದಿಂದಿಳಿದು ಜಗದ್ಗುರುಗಳವರು ತ್ರ್ಯಂಬಕೇಶ್ವರಕ್ಕೆ ಬರುತ್ತಲೇ ಊರಜನರು ಗೋದಾವರೀ ಮಂದಿರದಲ್ಲಿ ಸ್ವಾಗತಿಸಿ, ಪೂಜಿಸಿದರು. ಶ್ರೀ ಶ್ರೀಗಳವರು ಧರ್ಮರಕ್ಷಣೆ ಮತ್ತು ದೇವಾಲಯ ಮರ್ಯಾದಾಪಾಲನಾರ್ಥವಾಗಿ ಆದೇಶವಿತ್ತರು.

ಬ್ರಹ್ಮಗಿರಿಯಿಂದ ಗೋದಾವರಿಯು ಇಳಿದು, ಬಂದು, ಕುಶಾವರ್ತವೆಂಬ ಇಲ್ಲಿನ ಸರೋವರಕ್ಕೆ ಬಂದು, ಇಲ್ಲಿಂದ ಮುಂದೆ ನಾಸಿಕಕ್ಕೆ ಪ್ರವಹಿಸುತ್ತದೆ. ಮಧ್ಯಾಹ್ನ ಶ್ರೀಗಳವರು ಪುನಃ ನಾಸಿಕಕ್ಕೆ ಹಿಂದೆರಳಿಬಂದರು.

ಜ್ಯೈತ್ರ ಬ. ಬಿದಿಗೆ ದಿನ ಶ್ರೀಶ್ರೀಗಳವರು ಅಕ್ಷಯವಜ, ಶೃಂಗೇರಿಮಠ, ತಪೋವನಗಳನ್ನು ಸಂದರ್ಶಿಸಿದರು. ಇಲ್ಲಿಯೇ ಗೋದಾವರೀ-ಕಪಿಲಾ ಸಂಗಮವಾಗುತ್ತದೆ. ಇಲ್ಲಿಯೇ ಸೀತಾಕುಂಡ, ಶೂರ್ಪಣಕಾ ನಾಸಿಕ್ ಚ್ಛೇದ

ಶ್ರೀ ದ್ವಾರಕಾ ಜಗದ್ಗುರುಗಳು

(ಸ್ವಂ. ಸು. ತಂತಿ)

ನಾಸಿಕ್ ಮೇ 1— ಶ್ರೀ ದ್ವಾರಕಾ ಶಾರದಾಪೀಠದ ಶ್ರೀ ಜಗದ್ಗುರುಗಳು ಶ್ರೀ ಶಂಕರಾಚಾರ್ಯ ಮಹಾರಾಜರವರು 10 ದಿವಸಗಳಿಂದ ನಾಸಿಕ್‌ದಲ್ಲಿ ಮೊಕ್ಕಾಂ ಮಾಡಿ, ಪುಣ್ಯಸ್ಥಳಗಳನ್ನು ಸಂದರ್ಶಿಸಿ, ದಿನವಹಿ ಧಾರ್ಮಿಕ ಭಾಷಣಗಳನ್ನು ಮಾಡುತ್ತಿದ್ದರು. ನಾಳೆಯ ದಿವಸ ಯಾತ್ರಾರ್ಥವಾಗಿ ಭೀಮಾಶಂಕರಿಗೆ ಹೊರಟು ಅಲ್ಲಿಂದ ರಸ್ತೆ ಮಾರ್ಗವಾಗಿ, ಪೂನಾ, ಕೊಲ್ಲಾಪುರ್, ಹುಬ್ಬಳ್ಳಿ ಶಿವಮೊಗ್ಗಾ ಮೂಲಕ, ಮೈಸೂರು ಸಂಸ್ಥಾನದ ಮುಳುಬಾಗಲಿಗೆ ದಯ ಮಾಡಿಸುವರು.

ಬಂಡೆಯಲ್ಲಿ ಕೊರೆದು ಕೆತ್ತಿರುವ ಸಭಾ ಮಂಟಪ, ಬುದ್ಧಮಂದಿರಗಳನ್ನು ಈಕ್ಷಿಸಿ, ಬಂದರು

ಚೈತ್ರ ಬ. 4 ಕ್ಕೆ ಶ್ರೀ ಶ್ರೀಗಳವರು ಕ್ಷೇತ್ರಾಧಿದೇವತೆಯಾದ ಕಾಳೇರಾಮ ಮಂದಿರದ ಸಂದರ್ಶನ ಮಾಡಿದರು

ತ್ರ್ಯಂಬಕೇಶ್ವರ ಮತ್ತು ನಾ[illegible] ಗಳಲ್ಲಿ ಸರಕಾರದ ಶಾಸನದ ಬ[illegible] ಅಂತ್ಯಜದೂಷಿತವಾದ ದೇವಾ[illegible] ಲ್ಲಿ ಶ್ರೀಜಗದ್ಗುರುಗಳವರ ಆಜ್ಞೆ ಶಾಸ್ತ್ರೀಯ ಶುದ್ಧಿ ನಡೆಸಿ, ಪೂ[illegible] ಸಲು ಶ್ರೀ ಜಗದ್ಗುರುಗಳು ಆದೇ[illegible] ವಿತ್ತರು.

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
'ಪ್ರಬೋಧ' ಪುಟದಿಂದೊಡಗೂಡಿದ
ಸೋಮವಾರ ಸಂಚಿಕೆ ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--13-0

Save the Cow
ಗೋವಧೆ ನಿಲ್ಲಲಿ

Printed and Published
the
aj